

ಅಲ್ಲ. 2019ರಲ್ಲಿ ಫೇರ್/ ಫೇರ್‌ನೆಸ್, ವೈಟ್/ ವೈಟನಿಂಗ್ ಮತ್ತು ಲೈಟ್/ ಲೈಟನಿಂಗ್ ಎಂಬ ಪದಗಳನ್ನು ಪ್ಯಾಕೇಜಿಂಗ್‌ನಿಂದ ತೆಗೆದು ಹಾಕಲಾಗಿತ್ತು. ಆದರೆ ಉತ್ಪನ್ನದ ಹೆಸರನ್ನು ಫೇರ್‌ನೆಸ್‌ನಿಂದ ಗ್ಲೋ ಎಂದು ಬದಲಿಸಿದ್ದು ಇದೇ ಮೊದಲು. ಇಂತಿರುವಾಗ ಹೆಸರು ಬದಲಾಯಿಸಿದರೆ ಅಷ್ಟೇ ಸಾಕೇ? unileverbrandsinfo.com ಜಾಲತಾಣದಲ್ಲಿ ಫೇರ್ ಆ್ಯಂಡ್ ಲವ್ಲಿ ಕ್ರೀಮ್ ಬಗ್ಗೆ ಇರುವ ಮಾಹಿತಿ ಗಮನಿಸಿದರೆ ಅಲ್ಲಿನ್ನೂ ಹೆಸರು ಬದಲಾಗಿಲ್ಲ. ಕ್ರೀಮ್‌ನ ಉಪಯೋಗ ಏನು ಎಂಬ ವಿವರಣೆಯಲ್ಲಿ ಬೆಳ್ಳಗಾಗಿಸುವುದು ಎನ್ನುವ ವಿವರಣೆಯಿದೆ. ಈ ಕ್ರೀಮ್‌ನಲ್ಲಿ niacinamide ಬಳಸಲಾಗಿದೆ. ಇದು ಚರ್ಮದಲ್ಲಿನ ಮೆಲನಿನ್ ತಡೆಹಿಡಿಯಲಿರುವ ಪದಾರ್ಥ. ಅಂದರೆ ಹೆಸರು ಮಾತ್ರ ಬದಲಾಗಿದೆ. ಟ್ಯೂಬ್ ಮಾತ್ರ ಅದೇ ಎಂದಾಯಿತು. ಹೀಗಿರುವ ಫೇರ್ ಎಂಬ ಪದದ ಬದಲು ಗ್ಲೋ ಎಂದು ಬಳಸಿರುವುದಾದರೂ ಯಾಕೆ? ಫೇರ್ ಎಂಬುದನ್ನು ತೆಗೆದುಹಾಕಿದ್ದೇವೆ ಎಂಬುದು ಕೂಡಾ ಮಾರ್ಕೆಟಿಂಗ್ ತಂತ್ರ ಎಂಬುದು ಸ್ಪಷ್ಟ.

## ಬೆಳ್ಳಗಿರುವ ಹುಡುಗಿಗೇ ಡಿಮ್ಯಾಂಡ್

'ಹುಡುಗಿ ಕಪ್ಪಗಿದ್ದರೂ ಚೆನ್ನಾಗಿದ್ದಾಳೆ', ನಾವು ಸಾಮಾನ್ಯವಾಗಿ ಕೇಳುವ ಮಾತಿದು. ಕಪ್ಪು ಹುಡುಗ ಬೆಳ್ಳಗಿನ ಹುಡುಗಿಯನ್ನು ಮದುವೆಯಾದರೆ ಅಥವಾ ಬೆಳ್ಳಗಿನ ಹುಡುಗಿ ಕಪ್ಪಗಿನ ಹುಡುಗನನ್ನು ಮದುವೆಯಾದರೆ ಆ ಜೋಡಿಯನ್ನು ಕಣ್ಣರಳಿಸಿ ನೋಡುತ್ತದೆ ಸಮಾಜ. ವಧು/ವರರ ಜಾಹೀರಾತುಗಳನ್ನೇ ನೋಡಿ. ಬೆಳ್ಳಗಿರುವ ಹುಡುಗಿಯೇ ಬೇಕು ಎಂದು ಹೇಳುವ ಜಾಹೀರಾತುಗಳು ಸಾಕಷ್ಟು ಕಾಣಸಿಗುತ್ತವೆ. ಹುಡುಗಿಗೆ ಮದುವೆಯ ವಯಸ್ಸು ಆಯಿತೆಂದರೆ ಆಕೆಯನ್ನು ಬೆಳ್ಳಗೆ ಮಾಡಲು ಹರಸಾಹಸ ಪಡುವ ಹೆತ್ತವರೂ ಇದ್ದಾರೆ. ಒಂದಷ್ಟು ಕ್ರೀಮ್ ಹಚ್ಚು, ಫೇಸ್ ಪ್ಯಾಕ್ ಹಾಕು, ಬಿಸಿಲಿಗೆ ಜಾಸ್ತಿ ಓಡಾಡಬೇಡ ಎಂಬ ಉಪದೇಶಗಳು ರಾಶಿ ರಾಶಿ ಸಿಗುತ್ತವೆ. ಬಟ್ಟೆ ಖರೀದಿ ಮಾಡಲು ಹೋದರೆ ಕಪ್ಪು ಚರ್ಮದವರಿಗೆ ಇದಿಷ್ಟೇ ಬಣ್ಣ ಒಪ್ಪುತ್ತೆ ಎಂದು ಬಟ್ಟೆಗಳನ್ನು ತೋರಿಸುವ ಅಂಗಡಿಯವರಿಗೇನೂ ಕಡಿಮೆ ಇಲ್ಲ.

ಮಗಳಿಗೆ ಗಂಡು ಹುಡುಕುವ ಕೆಲಸ ಆರಂಭವಾಗುವುದೇ ಆಕೆಯ ಚಂದದ ಫೋಟೊ ಆಯ್ಕೆ ಮಾಡುವುದರಿಂದ. ಗಂಡಿನ ಕಡೆಯವರು ಬೆಳ್ಳಗಿರುವ ಹುಡುಗಿಯೇ ಬಯಸುತ್ತಾರೆ ಎಂದಾಗ ಕಪ್ಪಗಿರುವ ಹುಡುಗಿ ಫೋಟೊ ಬೆಳ್ಳಗೆ ಕಾಣುವಂತೆ ಮಾಡಲಾಗುತ್ತದೆ. ಮೊಬೈಲ್‌ನಲ್ಲಿ ಫೋಟೊ ಬೆಳ್ಳಗಾಗಿಸುವ ಫಿಲ್ಟರ್ ಇರುವ ಸಾಕಷ್ಟು ಆ್ಯಪ್‌ಗಳಿವೆ. ಇತ್ತೀಚೆಗೆ ಮ್ಯಾಟ್ರಿಮೊನಿ ಸೈಟ್ 'ಶಾದಿ ಡಾಟ್ ಕಾಂ' ತನ್ನ ವೆಬ್‌ಸೈಟ್‌ನಲ್ಲಿದ್ದ ಸ್ಕಿನ್ ಕಲರ್ ಸರ್ಚ್ ವಿರುದ್ಧ ಪ್ರತಿಭಟನೆಯ ದನಿ ಎದ್ದಾಗ ಆ ಸರ್ಚ್ ಫಿಲ್ಟರನ್ನು ಕೈ ಬಿಟ್ಟಿತ್ತು.

ಮದುವೆಯಾಗಿ ಗರ್ಭಿಣಿಯಾದರೂ ಬೆಳ್ಳಗಿನ ವ್ಯಾಮೋಹ ನಿಲ್ಲುವುದಿಲ್ಲ. ಚಹಾ ಕುಡಿಯಬೇಡ, ಮಗು ಕಪ್ಪಾಗುತ್ತದೆ; ಕೇಸರಿ ಮಿಶ್ರಿತ ಹಾಲು ಕುಡಿದರೆ ಹೊಟ್ಟೆಯಲ್ಲಿರುವ ಮಗು ಬೆಳ್ಳಗಿರುತ್ತದೆ ಎಂಬ ಉಪದೇಶಗಳು ಬೇರೆ. ಚರ್ಮದ ಬಣ್ಣ ಆಧರಿಸಿದ ತಾರತಮ್ಯ ಸಮಾಜದಲ್ಲಿ ಎಷ್ಟು ಹಾಸುಹೊಕ್ಕಾಗಿದೆ ಎಂಬುದಕ್ಕೆ ನಮ್ಮ ಸುತ್ತಮುತ್ತಲಿನ ವಿದ್ಯಮಾನಗಳು ಹಾಗೂ ಸಂವಹನ ಮಾಧ್ಯಮಗಳತ್ತ ಕಣ್ಣು ಹಾಯಿಸಿದರೆ ಸಾಕು. ಧಾರಾವಾಹಿ, ಜಾಹೀರಾತು, ಸುದ್ದಿ ಮಾಧ್ಯಮ, ಪತ್ರಿಕೆ, ನಿಯತಕಾಲಿಕೆ, ಸಿನಿಮಾ – ಎಲ್ಲೆಡೆಯೂ ಬಿಳಿ ಚರ್ಮವೇ ಸೌಂದರ್ಯ ಎಂಬಂತೆ ಬಿಂಬಿಸಲಾಗುತ್ತದೆ.

## ವಿಲನ್ ಯಾಕೆ ಕಪ್ಪು?

ಬಹುತೇಕ ಸಿನಿಮಾಗಳಲ್ಲಿ ವಿಲನ್ ಕಪ್ಪಗಿರುತ್ತಾನೆ. ಕ್ರೂರವಾಗಿರುವುದು ಅಥವಾ ಬಡತನವನ್ನು ಬಿಂಬಿಸಲೂ ಕಪ್ಪು ಚರ್ಮವೇ ಬೇಕು. ಬಾಲಿವುಡ್‌ನ ಬಹುತೇಕ ಸಿನಿಮಾಗಳಲ್ಲಿ ಈ ತಾರತಮ್ಯ ಕಾಣಬಹುದು. 'ಸೂಪರ್ 30' ಸಿನಿಮಾದಲ್ಲಿ ಆನಂದ್ ಕುಮಾರ್ ಅವರ ಪಾತ್ರ ನಿರ್ವಹಿಸಿದ ಹೃತಿಕ್ ರೋಷನ್ ಚರ್ಮದ ಬಣ್ಣ ಕಡು ಕಂದು. 'ಆರ್ಟಿಕಲ್ 15' ಸಿನಿಮಾದಲ್ಲಿ ದಲಿತ ಹೆಣ್ಣಿನ ಪಾತ್ರ ನಿರ್ವಹಿಸಿದ ಸಯಾನಿ ಗುಪ್ತಾ, ಮುಂಬೈ ಸ್ಲಂನಿಂದ ಬಂದ ರ್‍ಯಾಪರ್ 'ಗಲ್ಲಿಬಾಯ್'ನ ರಣವೀರ್ ಸಿಂಗ್, 'ಉಡ್ತಾ ಪಂಜಾಬ್' ಸಿನಿಮಾದಲ್ಲಿ ಬಿಹಾರದ ಹುಡುಗಿಯಾದ ಆಲಿಯಾ ಭಟ್ – ಬೆಳ್ಳಗಿದ್ದ ನಟ ನಟಿಯರೆಲ್ಲರ ಬಣ್ಣವನ್ನೂ ಕಡು ಕಂದು ಬಣ್ಣವನ್ನಾಗಿ ತೋರಿಸಲಾಗಿತ್ತು. ಹಾಗಾದರೆ ಸಿನಿಮಾ ರಂಗದಲ್ಲಿ ಕಪ್ಪಗಿರುವ ಕಲಾವಿದರಿಲ್ಲವೇ? ಇದ್ದಾರೆ. ಆದರೆ ತೆರೆಯ ಮೇಲೆ ಅವರನ್ನು ಗೌರವರ್ಣದವರಾಗಿಯೇ ತೋರಿಸಲಾಗುತ್ತದೆ. ಈ ತಾರತಮ್ಯದ ಬಗ್ಗೆ ನಟಿ ನಂದಿತಾ ದಾಸ್ ದನಿಯೆತ್ತಿದ್ದರು. ತನ್ನ ಬಗ್ಗೆ ಮಾಧ್ಯಮಗಳು ಬರೆಯುವಾಗ Dark and Dusky ಎಂಬ ಪದಗಳನ್ನು ಬಳಸುತ್ತವೆ ಎಂದಿದ್ದ ನಂದಿತಾ, ವರ್ಷಗಳ ಹಿಂದೆಯೇ 'ಡಾರ್ಕ್ ಈಸ್ ಬ್ಯೂಟಿಫುಲ್' ಎಂಬ ಅಭಿಯಾನವನ್ನು ಹುಟ್ಟುಹಾಕಿದ್ದರು.

## ಬದಲಾಗುತ್ತಿದೆಯೇ ದೃಷ್ಟಿಕೋನ?

2019ರಲ್ಲಿ ಮಿಸ್ ದಕ್ಷಿಣ ಆಫ್ರಿಕಾ ಜೊಬಿಬಿನಿ ತುಂಜಿ 'ಮಿಸ್ ಯುನಿವರ್ಸ್' ಸೌಂದರ್ಯ ಸ್ಪರ್ಧೆ ಗೆದ್ದಾಗ ಲೈನಾ ಲೋಪಜ್ (2011ರ ಮಿಸ್ ಯುನಿವರ್ಸ್) ಅವರು ಇನ್‌ಸ್ಟಾಗ್ರಾಂನಲ್ಲಿ ಬರೆದ ಸಾಲು: Finally the universe is giving value to black skin. ಸೌಂದರ್ಯ ಕಿರೀಟ ಗೆದ್ದ ತುಂಜಿ, 'ನಾನು ಬೆಳೆದ ಜಗತ್ತಿನಲ್ಲಿ ನನ್ನ ಹಾಗೆ ಕಾಣುವ, ನನ್ನಂಥ ಚರ್ಮದ ಬಣ್ಣ ಮತ್ತು ಕೂದಲು ಇರುವ ಮಹಿಳೆಯನ್ನು ಸೌಂದರ್ಯವತಿಯರು ಎಂದು ಯಾರೂ ಪರಿಗಣಿಸುವುದಿಲ್ಲ. ಇದು ಇಲ್ಲಿಗೇ ನಿಂತು ಹೋಗಲಿದೆ ಎಂದು ನಾನು ಭಾವಿಸಿದ್ದೇನೆ' ಎಂದಿದ್ದರು. ತುಂಜಿ ಅವರ ಮಾತು ಪ್ರತಿಯೊಬ್ಬರ ಮನಸ್ಸಿನಲ್ಲಿಯೂ ಯೋಚನೆಯ ತರಂಗಗಳನ್ನೆಬ್ಬಿಸಬೇಕು.

ಪ್ರತಿಕ್ರಿಯಿಸಿ: feedback@sudha.co.in